# ಸುದ್ದಿ ಸಂಚಯ




*ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಿಂದ ಜ್ಞಾನಪ್ರಸಾರ ಅಭಿಯಾನ*

ಅಕ್ಟೋಬರ್ 5, ವಿಜಯದಶಮಿಯಂದು ಮೈಸೂರಿನ ರಾಮಕೃಷ್ಣ ಆಶ್ರಮದಿಂದ 'ಜ್ಞಾನವಾಹಿನಿ', ಎಂಬ ಬೃಹತ್ ಪ್ರಮಾಣದ ಒಂದು ಮಹತ್ವಪೂರ್ಣ ಯೋಜನೆಯು ಉದ್ಘಾಟಿಸಲ್ಪಟ್ಟಿತು. ಹೆಸರೇ ಸೂಚಿಸುವಂತೆ ಕರ್ನಾಟಕದ ಅತ್ಯಂತ ದೂರದ ಕುಗ್ರಾಮಗಳಿಗೂ ಜ್ಞಾನವನ್ನು ಪಸರಿಸುವ ಉದ್ದೇಶ ಈ ಯೋಜನೆಯದಾಗಿದೆ. ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳಾದ ಶ್ರೀಮತ್ ಸ್ವಾಮಿ ಸುರೇಶಾನಂದಜಿಯವರು ಈ ಕಾರ್ಯಕ್ರಮವನ್ನು ವಿಧ್ಯುಕ್ತವಾಗಿ ಉದ್ಘಾಟಿಸಿದರು. *ಶೈಕ್ಷಣಿಕವಾದ ಈ ಕಾರ್ಯಕ್ರಮವು ವ್ಯಕ್ತಿಯ ಎಲ್ಲ ಆಯಾಮಗಳ—ಅವನಲ್ಲಿ ಸುಪ್ತವಾಗಿರುವ ಬೌದ್ಧಿಕ ಮತ್ತು ಆಧ್ಯಾತ್ಮಿಕ ಆಯಾಮಗಳ—ವಿಕಾಸಕ್ಕಾಗಿ ರೂಪಿಸಲಾಗಿದ್ದು, ಪ್ರಧಾನವಾಗಿ ಯುವಜನತೆ ಮತ್ತು ಮಕ್ಕಳನ್ನು ಕೇಂದ್ರವಾಗಿರಿಸಿಕೊಂಡಿದೆ. ಸ್ವಾಮಿ ವಿವೇಕಾನಂದರು ಆಧುನಿಕ ಭಾರತದ ದೇಶಭಕ್ತಿಯ ಪ್ರತಿರೂಪವಾಗಿದ್ದರು,ಜವಾಬ್ದಾರಿಯುತ ರಾಷ್ಟ್ರೀಯತಾ ಭಾವನೆಯ ಸಂಕೇತವಾಗಿದ್ದರು. ಭಾರತದ ಅತ್ಯಂತ ಶಕ್ತಿಯುತವಾದ ಸಾಂಸ್ಕೃತಿಕ ಪ್ರವಾಹ ಮತ್ತು ಅಧ್ಯಾತ್ಮದ ಗಭೀರತೆಯನ್ನು ಆಧುನಿಕತೆಯೊಂದಿಗೆ ಮೇಳೈಸಿ ಕಾರ್ಯಗತಗೊಳಿಸುವ ಯೋಜನೆಯನ್ನು ಹಮ್ಮಿಕೊಳ್ಳಬೇಕೆಂದು ಭಾರತೀಯರಿಗೆ ಕರೆಯಿತ್ತಿದ್ದರು.*

ಮೈಸೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿಯವರು ಕಾರ್ಯಕ್ರಮಕ್ಕೆ ಎಲ್ಲರನ್ನೂ ಸ್ವಾಗತಿಸುತ್ತ, ಸ್ವಾಮಿ ವಿವೇಕಾನಂದರ ಸ್ಫೂರ್ತಿಯುತವಾದ ನುಡಿಗಳು ಈ ಕಾರ್ಯಕ್ರಮಕ್ಕೆ ಪ್ರೇರಕಶಕ್ತಿಯಾಗಿವೆ ಎಂದರು. 'ಗುಡ್ಡವು ಮೊಹಮ್ಮದನ ಬಳಿ ಹೋಗಲಾಗದಿದ್ದಲ್ಲಿ ಮೊಹಮ್ಮದನೇ ಗುಡ್ಡದ ಬಳಿ ಬರಬೇಕು. ಅಂತೆಯೇ ಬಡಜನತೆ ವಿದ್ಯಾಭ್ಯಾಸ ಪಡೆಯಲು ಬರಲಾಗದಿದ್ದಲ್ಲಿ ವಿದ್ಯಾಭ್ಯಾಸವೇ ಅವರ ಬಳಿಗೆ ಹೋಗಬೇಕು', ಎಂಬ ಸ್ವಾಮಿ ವಿವೇಕಾನಂದರ ನುಡಿಯಂತೆ ಜ್ಞಾನವನ್ನು ಗ್ರಾಮನಿವಾಸಿಗಳ ಬಾಗಿಲಿಗೇ ಕೊಂಡೊಯ್ಯುವುದು ಜ್ಞಾನವಾಹಿನಿ. ಈ ಕಾರ್ಯಕ್ರಮದಲ್ಲಿ ಬಳಸಲ್ಪಡುವ ಎಲ್ಲ ದೃಕ್‌ಶ್ರವಣ ಸಾಮಗ್ರಿಗಳಲ್ಲೂ ಗ್ರಾಮೀಣರ ಹೃದಯಕ್ಕೆ ತಟ್ಟುವಂತೆ ಅತ್ಯಂತ ಸರಳವಾದ ಭಾಷೆಯನ್ನು ಉಪಯೋಗಿಸಲಾಗಿದೆ.

ಸ್ವಾಮಿ ಸುರೇಶಾನಂದಜಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಭಾರತದ ಗ್ರಾಮವಾಸಿಗಳಲ್ಲಿ ಬೌದ್ಧಿಕಶಕ್ತಿಗೇನೂ ಕೊರತೆ ಇಲ್ಲ, ಆದರೆ ಅದರ ವಿಕಾಸಕ್ಕಾಗಿ ನಾವು ಪ್ರಯತ್ನಿಸಿಲ್ಲ ಎಂದು ತಿಳಿಸಿದರು.

ರೈಟ್ ಲೈವ್ಲಿಹುಡ್ ಪ್ರಶಸ್ತಿಖ್ಯಾತ ಡಾ. ಸುದರ್ಶನ್‌ರವರು ಮಾತನಾಡುತ್ತಾ ಸಮಾಜಸೇವೆಯಲ್ಲಿ ತಮ್ಮ ವೈಯಕ್ತಿಕ ಅನುಭವವನ್ನು ತಿಳಿಸಿದರು. ಸ್ವಾಮಿ ವಿವೇಕಾನಂದರ ಮುಖ್ಯ ಸಂದೇಶವಾದ—"*ವ್ಯಕ್ತಿಗಳಲ್ಲಿನ ಸುಪ್ತ ದೈವತ್ವ*"—ವ್ಯಾಪಕವಾಗಿ ಪ್ರಸಾರವಾದರೆ ಜನರು ನೀತಿಮಾರ್ಗದಲ್ಲಿ ನಡೆಯಲು ನೆರವಾಗುತ್ತದೆ ಹಾಗೂ ಭ್ರಷ್ಟಾಚಾರದಂಥ ಸಾಮಾಜಿಕ ಅನಿಷ್ಟಗಳು ದೂರವಾಗುತ್ತವೆ ಎಂದರು.

ಡಿಸೆಂಬರ್ 2004 ಕ್ಕೆ ಮುಕ್ತಾಯವಾಗುವ ಜ್ಞಾನವಾಹಿನಿ ಕಾರ್ಯಕ್ರಮದ ಮೊದಲನೆ ಹಂತ ಕರ್ನಾಟಕದ 15 ಜಿಲ್ಲೆಗಳನ್ನು ಒಳಗೊಂಡಿರುತ್ತದೆ. ಮೊದಲಿಗೆ ಚಾಮರಾಜನಗರ ಜಿಲ್ಲೆಯಿಂದ ಅಕ್ಟೋಬರ್ 6ರಂದು ಈ ಕಾರ್ಯಕ್ರಮ ಆರಂಭವಾಗಿದೆ. ಸುಮಾರು ಒಂದೊಂದು ತಿಂಗಳಿನಂತೆ ಎಲ್ಲ ಜಿಲ್ಲೆಗಳಲ್ಲಿನ ಪ್ರತಿಯೊಂದು ಗ್ರಾಮದಲ್ಲೂ 2 ದಿನಗಳ ಜ್ಞಾನವಾಹಿನಿ ಕಾರ್ಯಕ್ರಮವಿರುತ್ತದೆ. *

---

**ಜ್ಞಾನವಾಹಿನಿ ಕಾರ್ಯಕ್ರಮಗಳು**

**ನವೆಂಬರ್ 2003**

*ಜ್ಞಾನವಾಹಿನಿ ಕಾರ್ಯಕ್ರಮಗಳು ನವೆಂಬರ್5 ರಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಾರಂಭವಾಗುತ್ತವೆ. ಕಾರ್ಯಕ್ರಮಗಳ ವಿವರಗಳನ್ನು ಶಿವಮೊಗ್ಗದಲ್ಲಿನ ಶ್ರೀಯುತ ಬಿ.ಎಮ್. ಚಿಕ್ಕಸ್ವಾಮಿ, ಫೋನ್.ನಂ.274964 ಇವರಿಂದ ಪಡೆಯಬಹುದು. "ವಿವೇಕ ಪ್ರಭ"ದ ಸ್ಥಳೀಯ ಪೋಷಕರು, ಆಜೀವ ಸದಸ್ಯರು, ಚಂದಾದಾರರೆಲ್ಲರೂ ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗಿ ವಿನಂತಿ.*

---